**ದಿಃ 06.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಪ್ರಮಾಣೀಕರಿಸಿರುತ್ತಾರೆ.**

**ಮುಂದುವರೆದ ಮುಖ್ಯ ವಿಚಾರಣೆ ಶ್ರೀ.ಕೆ.ಹೆಚ್.ಇ ವಕೀಲರಿಂದಃ ಪ್ರತಿವಾದಿಯರ ಪರವಾಗಿಃ**

**26)** ದಾವೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಗುರುತಿಸಿದ್ದು, ಮಹ್ಮದ ಜಾಫರಸಾಬ ರವರು ನೀಡಿರುವ ದಿನಾಂಕಃ 16.05.2006 ರ ಅರ್ಜಿಯ ಪ್ರತಿಯನ್ನು ನಿ.ಡಿ-1 ಎಂದು, ದಿನಾಂಕಃ 16.05.2006 ರ ಮಹ್ಮದ ಜಾಫರಸಾಬ ಮತ್ತು ಬಾಷಾಸಾಬ ರವರ ಒಪ್ಪಿಗೆಯ ಪತ್ರದ ಪ್ರತಿಯನ್ನು ನಿ.ಡಿ-2 ಎಂದು, ಸರ್ವೆ ನಂಬರಃ 172 ಬ ಪ್ಲಾಟ ನಂಬರಃ 43 ಮತ್ತು ಸರ್ವೆ ನಂಬರಃ 172 ಬ ಪ್ಲಾಟ ನಂಬರಃ 45 ರ ಪಹಣಿ ಪತ್ರಿಕೆಗಳನ್ನು ನಿ.ಡಿ-3 ಮತ್ತು ನಿ.ಡಿ-4 ಎಂದು ಗುರುತಿಸಲಾಯಿತು. ದಿನಾಂಕಃ 16.05.2006 ರ ಕೋಳೂರ ಗ್ರಾಮ ಪಂಚಾಯತಿಯ ಸಾಧಾರಣ ಸಭೆ ನಂಬರಃ 2 ರ ನಡವಳಿಕೆ ಪ್ರತಿಯನ್ನು ನಿ.ಡಿ-5 ಎಂದು, ಕೋಳೂರ ಗ್ರಾಮ ಪಂಚಾಯತಿಯ ಮೂರು ಕರ ಆಕರಣೆ ಯಾದಿಗಳನ್ನು ನಿ.ಡಿ-6 ರಿಂದ ನಿ.ಡಿ-8 ಎಂದು ಗುರುತಿಸಲಾಯಿತು. ಗ್ರಾಮ ಪಂಚಾಯತಿ ಕೋಳೂರ ರವರ ದಿನಾಂಕಃ26.02.2019 ರ ಪತ್ರದ ಪ್ರತಿಯನ್ನು ನಿ.ಡಿ-9 ಎಂದು, ಸಹಾಯಕ ನಿಬಂಧಕರು ಸಹಕಾರಿ ಸಂಘಗಳ ಉಪವಿಭಾಗರವರ ದಿನಾಂಕಃ 07.11.2012 ರ ಪಾರಂ ನಂಬರಃ 4 ನ್ನು ನಿ.ಡಿ-10 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.